## ಶಾಂತಂ ಪಾಪಂ! ಶಾಂತಂ ಪಾಪಂ!

'ಕಲರ್ಸ್ ಕನ್ನಡ' ವಾಹಿನಿಯ ಧಾರಾವಾಹಿಗಳು 'ಶಾಂತಂ ಪಾಪಂ' ಕಾರ್ಯಕ್ರಮದ ಪ್ರಭಾವಕ್ಕೆ ಒಳಗಾಗಿರಬಹುದೆ? ಅಪರಾಧ ಜಗತ್ತಿನ ಕಥನಗಳನ್ನು ಆಧರಿಸಿದ 'ಶಾಂತಂ ಪಾಪಂ' ಮಾಲಿಕೆಯಿಂದ ಪ್ರೇರಿತರಾದ ನಿರ್ದೇಶಕರು ಧಾರಾವಾಹಿಗಳಲ್ಲೂ ಕ್ರೌರ್ಯವನ್ನು ವೈಭವೀಕರಿಸುತ್ತಾ ಅಪರಾಧವನ್ನು ಮೆರೆಸುತ್ತಿದ್ದಾರೆ. ಕಿರುತೆರೆಗೆ ಸೆನ್ಸಾರ್ ಅವಶ್ಯಕತೆ ಇದೆ.

—ಪಿ.ಜೆ. ರಾಘವೇಂದ್ರ, ಮೈಸೂರು

## ಹೃದಯಗಳ ಸೂರೆಗೊಂಡ ಸಂದರ್ಶನ

ಝೀ ಕನ್ನಡದಲ್ಲಿ ರಮೇಶ್ ಅವರೊಂದಿಗಿನ ವಾರಾಂತ್ಯ ಕಾರ್ಯಕ್ರಮದಲ್ಲಿ ಹೃದಯತಜ್ಞ ಮಂಜುನಾಥ್ ಅವರ ಸಂದರ್ಶನ ಸಮರ್ಪಕವಾಗಿತ್ತು. ನೂರಾರು ಹೃದ್ರೋಗಿಗಳನ್ನು ಉಳಿಸಿರುವ ಧೀಮಂತ ವೈದ್ಯರ ಕಾರ್ಯ ಶ್ಲಾಘನೀಯ.

ಯಾಂತ್ರಿಕ ಜೀವನದ ಒತ್ತಡವೂ ಹೃದ್ರೋಗಕ್ಕೆ ಕಾರಣವಂತೆ. ಸಣ್ಣ ಮಕ್ಕಳಿಗೆ ಶಾಲೆಯ ಸಮಯ 10ರಿಂದ ಮಧ್ಯಾಹ್ನ 1ಗಂಟೆಯವರೆಗೆ ಇದ್ದರೆ ಅವರ ಒತ್ತಡ ಕಡಿಮೆಯಾಗುತ್ತದೆ ಎಂದು ಡಾ. ಮಂಜುನಾಥ್ ಅಭಿಪ್ರಾಯಪಟ್ಟರು. ಅವರ ಸಲಹೆಯನ್ನು ಪೋಷಕರು ಮತ್ತು ವ್ಯವಸ್ಥೆ ಚಿಂತನೆ ಮಾಡಬೇಕು.

ವೈದ್ಯರಿಂದ ಸಹಾಯಪಡೆದ ಕೆಲವರು ಕಾರ್ಯಕ್ರಮಕ್ಕೆ ಆಗಮಿಸಿ ಮುಕ್ತಕಂಠದಿಂದ ಸ್ಮರಿಸಿದ ಸಂದರ್ಭ ಕಂಡು ಕಣ್ಣು ತುಂಬಿ ಬಂತು. ಸರ್ಕಾರಿ ಆಸ್ಪತ್ರೆಯಲ್ಲಿ ಒಳ್ಳೆಯ ಸೇವೆ ಮಾಡುವವರೂ ಇದ್ದಾರೆ ಎನ್ನುವುದು ಹೆಮ್ಮೆ ಮೂಡಿಸಿತು. ಅವರ ಸರಳತೆ, ಪ್ರಾಮಾಣಿಕತೆ ಸಮಾಜಕ್ಕೆ ಮಾದರಿ.

—ಪೂರ್ಣಿಮಾ ಮೂರ್ತಿ, ಭಾರತೀ ಗಂಗಾಧರ್, ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು; ರಾಘವೇಂದ್ರ ಜೋಯಿಸ್, ಮೈಸೂರು

## ಮಹಿಳೆಯ ಅವಹೇಳನ; ಕಡಿವಾಣ ಅಗತ್ಯ

ಝೀ ಕನ್ನಡದ 'ಸತ್ಯ'ದ ನಾಯಕಿಗೆ ಪ್ರಶಸ್ತಿ ಬರುತ್ತದೆ. ಅದನ್ನು ಸ್ವೀಕರಿಸಲು ಹೋಗುವ ಸಂದರ್ಭದಲ್ಲಿ ಆಕೆ ತನ್ನ ಪತಿಯ ಒತ್ತಾಯಕ್ಕೆ ಸೀರೆಯನ್ನು ಬಿಟ್ಟು ಪ್ಯಾಂಟ್–ಶರ್ಟ್ ಧರಿಸುತ್ತಾಳೆ. ಈ ಕಾರಣಕ್ಕೆ ಅವರ ಕುಟುಂಬದವರು ಹೀಯಾಳಿಸುತ್ತಾರೆ. ಈ ಸನ್ನಿವೇಶವನ್ನೇ ಒಂದು ವಾರ ತೋರಿಸಿದ್ದಾರೆ.

ತೊಡುವ ಬಟ್ಟೆಗೂ ವ್ಯಕ್ತಿತ್ವಕ್ಕೂ ಯಾವ ಸಂಬಂಧವೂ ಇಲ್ಲ. ಆದರೂ ಸತ್ಯಳ ಪತಿ ಕಾರ್ತಿಕ್ ಅವಳ ಬಟ್ಟೆಯ ಬಗ್ಗೆ ತಾನೇ ನಿರ್ಧಾರ ಮಾಡುತ್ತೇನೆ ಎಂದು ಹೇಳುತ್ತಾನೆ. ಇಲ್ಲಿ ಅವಳ ಸಾಧನೆಯ ಪುರಸ್ಕಾರಕ್ಕೆ ಮೆಚ್ಚುಗೆಯೇ ಕಾಣುತ್ತಿಲ್ಲ. ಇದು ಮುಜುಗರದ ಸಂಗತಿ. ಪುರುಷನಷ್ಟೇ ಸರಿಸಮಾನವಾದ ಮಹಿಳೆಯ ಭಾವನೆಗಳಿಗೆ, ಅವಳ ಅಭಿರುಚಿಗೆ ಮನ್ನಣೆ ನೀಡುವುದಿಲ್ಲ. ಇದು ಬಹುತೇಕ ಧಾರಾವಾಹಿಗಳಲ್ಲಿ ಕಂಡುಬರುವ ದೃಶ್ಯ. ಮಹಿಳೆಯನ್ನು ಎರಡನೇ ದರ್ಜೆಯಲ್ಲಿ ನೋಡುವ ಪರಿಪಾಟಕ್ಕೆ ಕಡಿವಾಣ ಹಾಕುವುದು ಒಳಿತು.

—ಪದ್ಮಶ್ರೀ ಹೆಚ್.ಎಸ್. ಬೆಂಗಳೂರು

ವಾರದ ಪತ್ರ

## 'ಭಾಗ್ಯಲಕ್ಷ್ಮಿ'ಯಲ್ಲಿ ಒಳ್ಳೆಯ ಪಾಠ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ' ಧಾರಾವಾಹಿಯಲ್ಲಿ ಧನಾತ್ಮಕ ಅಂಶಗಳನ್ನು ಪರಿಣಾಮಕಾರಿಯಾಗಿ ತೋರಿಸಿದರು. ಕುಟುಂಬದವರೆಲ್ಲ ಶ್ರೀ ಸತ್ಯನಾರಾಯಣ ಪೂಜೆಗೆ ತೆರಳಿದರೆ, ಟ್ಯೂಷನ್ ಕಾರಣಕ್ಕೆ ಭಾಗ್ಯಾಳ ಮಗಳನ್ನು ಮನೆಯಲ್ಲೇ ಬಿಟ್ಟು ಹೋಗುತ್ತಾರೆ. ಆಗ ಮನೆಗೆ ಬಂದ ಮಹಿಳೆ ಟ್ಯೂಷನ್ ಮಾಡದೆ ಸಾನ್ವಿಗೆ ಪಿಜ್ಜಾ, ಚಿಪ್ಸ್ ಮತ್ತು ಕೋಲಾ ತರಿಸಿಕೊಡುತ್ತಾಳೆ. ಇದು ಮಕ್ಕಳನ್ನು ಬೇರೆಯವರ ಮೇಲ್ವಿಚಾರಣೆಗೆ ಬಿಟ್ಟರೆ ಏನಾಗುತ್ತದೆ ಎಂಬುದಕ್ಕೆ ಉದಾಹರಣೆಯಂತಿದೆ. ದೇಹ ಪ್ರಕೃತಿಗೆ ಹಿಡಿಸದ ತಿನಿಸುಗಳನ್ನು ಸಿಕ್ಕಿದ್ದೇ ಸುವರ್ಣಾವಕಾಶ ಅಂತ ಗಬಗಬನೆ ತಿನ್ನುವ ಸಾನ್ವಿ ತೀವ್ರ ಹೊಟ್ಟೆ ನೋವು ಹಾಗೂ ಅಲರ್ಜಿಯಿಂದ ಬಳಲುವ ದೃಶ್ಯ ಪೋಷಕರಿಗೆ ಪಾಠದಂತಿತ್ತು.

—ಮಲ್ಲಿಕಾರ್ಜುನ ಸುರಧೇನುಪುರ

## 'ಥಟ್..' ಮರುಪ್ರಸಾರಗೊಳ್ಳಲಿ...

ಚಂದನದ 'ಥಟ್ ಅಂತ ಹೇಳಿ'ಯ ಇತ್ತೀಚಿನ ಕಾರ್ಯಕ್ರಮದಲ್ಲಿ ನಿರೂಪಕ ಡಾ. ಸೋಮೇಶ್ವರ್ ಅವರು ಮೆದುಳಿನ ಗಾತ್ರ ಹಾಗೂ ಅದರ ಕಾರ್ಯವೈಖರಿಯನ್ನು ಮನಮುಟ್ಟುವ ಹಾಗೆ ತಿಳಿಸಿದರು. ಸ್ಪರ್ಧಾಳುಗಳ ಜೊತೆಗೆ ನಿರೂಪಕರು ಉತ್ತಮವಾದ ಪ್ರಶ್ನೆಗಳನ್ನು ಕೇಳಿ ಮೆದುಳಿಗೆ ಸಂಬಂಧಪಟ್ಟ ಅನೇಕ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಜನರು ಮೂಢನಂಬಿಕೆಯ ನೆಪವೊಡ್ಡಿ ಕಾಯಿಲೆಗಳನ್ನು ಉಲ್ಬಣಗೊಳಿಸುತ್ತಾರೆ. ಈ ಕಾರ್ಯಕ್ರಮದ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಿದ್ದಾರೆ. ಆಪತ್ಕಾಲದಲ್ಲಿ ಜೀವ ರಕ್ಷಣೆಯನ್ನು ಹೇಗೆ ನಿಭಾಯಿಸಬೇಕು ಎಂದು ವಿವರ ನೀಡಿದ್ದಾರೆ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಕರುಣೆಯಿರಲಿ ಸಕಲ ಪಾತ್ರಗಳಲ್ಲಿ...

ಕಲರ್ಸ್ ಕನ್ನಡದ 'ಲಕ್ಷ್ಮಿ ಬಾರಮ್ಮ' ಧಾರಾವಾಹಿಯಲ್ಲಿ ನಾಯಕಿಗೆ ತೊಂದರೆ ಕೊಡುವವರೇ ಹೆಚ್ಚು. ಅವಳ ಮದುವೆಯ ಹಿಂದಿನ ದಿನ ತಾಳಿ ಕಟ್ಟಬೇಕಾದ ಹುಡುಗ 'ತನಗೆ ಮದುವೆ ಇಷ್ಟ ಇಲ್ಲ' ಎನ್ನುತ್ತಾನೆ. ಅದೇ ಸಮಯಕ್ಕೆ ತಾಳಿಯನ್ನು ಬೆಂಕಿಗೆ ಎಸೆಯುವುದು, ಮುಹೂರ್ತದ ವೇಳೆ ಅವಳ ದೊಡ್ಡಮ್ಮ ತಾಳಿಯನ್ನೇ ಕದಿಯುತ್ತಾರೆ. ಇದಕ್ಕೆಲ್ಲ ಅವಳಿಗೆ ತಂದೆ–ತಾಯಿ ಇಲ್ಲದಿರುವುದೇ ಕಾರಣ. ಅಸೂಯೆಯನ್ನು ಮೀರಿ ಸಹಾನುಭೂತಿ–ಕರುಣೆಯನ್ನು ಏಕೆ ತೋರಿಸಬಾರದು?

—ಶರ್ಮಿಷ್ಠಾ ವೇದಗರ್ಭ, ಬೆಂಗಳೂರು

## ಜೀವನದ ಕಥೆಯಿಲ್ಲ, ಕೀರ್ತನೆಗಳೂ ಇಲ್ಲ

ಕಲರ್ಸ್ ಕನ್ನಡದ 'ದಾಸಪುರಂದರ' ಮುಗಿಸಿದ್ದು ಆಶ್ಚರ್ಯವಾದರೂ ಸಂತೋಷವಾಯಿತು. ದಾಸರ ಬಗ್ಗೆ ತಿಳುವಳಿಕೆ ಮೂಡಿಸುವ ಬದಲು ಸಾಧಾರಣ ಕಥೆಯಂತೆ ಇದನ್ನು ರೂಪಿಸಿದ್ದು ನೋವಾಯಿತು. ದಾಸ ಶ್ರೇಷ್ಠರ ಜೀವನದ ಕಥೆಯನ್ನು ತಿಳಿಸಲಿಲ್ಲ. ಅವರ ರಚನೆಯ ಕೀರ್ತನೆಗಳನ್ನೂ ಸರಿಯಾಗಿ ಬಳಸಲಿಲ್ಲ. ಏಕಾಏಕಿ ಧಾರಾವಾಹಿಯನ್ನು ಮುಗಿಸಲಾಯಿತು. ದಾಸರ ಕೀರ್ತನೆಗಳನ್ನು ಕೇಳಲು ಕಾತರದಿಂದ ಇದ್ದೆವು.

—ಹೆಚ್.ಕೆ. ಚಂದ್ರಿಕಾ, ದಾವಣಗೆರೆ

## ಶೈವ ಆರಾಧಕರಿಗೆ ವಿಷ್ಣುವಿನ ಹೆಸರೆ?

ಕಲರ್ಸ್ ಕನ್ನಡ ವಾಹಿನಿಯ ಧಾರಾವಾಹಿ 'ರಾಮಾಚಾರಿ'ಯಲ್ಲಿ ತಂದೆ ನಾರಾಯಣಾಚಾರ್ ಶೈವ ಆರಾಧಕರು ಎಂದು ಪ್ರತಿಪಾದಿಸುತ್ತಾರೆ. ವಿಪರ್ಯಾಸ ಎಂದರೆ ಮಧ್ವಸಂಪ್ರದಾಯದವರಂತೆ ವಿಷ್ಣುವಿನ ಹೆಸರನ್ನು ಇಟ್ಟಿದ್ದಾರೆ. ಈ ಸೂಕ್ಷ್ಮವನ್ನು ಏಕೆ ನಿರ್ದೇಶಕರು ಗಮನಿಸಲಿಲ್ಲ.

—ಎನ್.ಪಿ. ಸುಬ್ಬರಾವ್, ದಾವಣಗೆರೆ

## ಮಾರ್ಮಿಕ ಕಥೆ

ಸಿರಿ ಕನ್ನಡದ 'ಯುಗಾಂತರ'ದಲ್ಲಿ ವಾಸ್ತವ ಸಮಾಜದ ಮನಸ್ಥಿತಿಯನ್ನು ತಳಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಪ್ರಾಮಾಣಿಕತೆ ಒಂದು ಅಗತ್ಯ ಮೌಲ್ಯ ಎನ್ನುವುದನ್ನು ನಿರೂಪಿಸಿರುವುದು ಒಳ್ಳೆಯ ಅಂಶ. ಜಿಲ್ಲಾಧಿಕಾರಿ ಅರುಂಧತಿ, ಪೊಲೀಸ್ ಇಲಾಖೆಯ ಮುಖ್ಯಸ್ಥರು ಪ್ರಾಮಾಣಿಕರು. ಅವರ ಕೆಳ ಅಧಿಕಾರಿಗಳು ಇದಕ್ಕೆ ತದ್ವಿರುದ್ಧ. ಇದರ ಜೊತೆ ಕುಟುಂಬ, ಬಂಧುಬಳಗ ಸಂಬಂಧಗಳಲ್ಲಿ ಸ್ವಾರ್ಥಪರತೆ ಹೇಗಿರುತ್ತದೆ ಎನ್ನುವುದನ್ನು ತೋರಿಸುತ್ತಾರೆ.

ವೈಭವದ ಬದುಕಿನ ಗೀಳು ಹೇಗೆ ದಿವಾಳಿ ಮಾಡುತ್ತದೆ, ಆಸ್ತಿಯನ್ನು ಕಬಳಿಸಲು ಹೇಗೆ ದಾಂಪತ್ಯ ವಿಚ್ಛೇದನ ಮಾಡುತ್ತಾರೆ, ಹಣಕ್ಕಾಗಿ ಮನುಷ್ಯ ಎಷ್ಟು ಅಮಾನುಷನಾಗುತ್ತಾನೆ ಎನ್ನುವ ಸೂಕ್ಷ್ಮವೂ ಇದರಲ್ಲಿದೆ. ಎಚ್. ಎಸ್. ವೆಂಕಟೇಶ್ ಮೂರ್ತಿ ರಚಿಸಿರುವ ಶೀರ್ಷಿಕೆ ಗೀತೆ ಕಥೆಗೆ ಸೂಕ್ತವಾಗಿದೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ